# ತುಮಕೂರು ವಿಶ್ವವಿದ್ಯಾನಿಲಯ

ಸಂಖ್ಯೆ:ತು.ವಿ:ಅ.ವಿ:ಅ.ಉ.ನೇ:2026–27/1430 ದಿನಾಂಕ:23.07.2026

## : ಪರಿಷ್ಕೃತ ಅಧಿಸೂಚನೆ :

ವಿಷಯ : ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳ ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಸಲ್ಲಿಸುವ ದಿನಾಂಕವನ್ನು ವಿಸ್ತರಿಸಿರುವ ಕುರಿತು.

ಉಲ್ಲೇಖ : 1. ಈ ಕಚೇರಿ ಅಧಿಸೂಚನೆ ಸಂಖ್ಯೆ:ತು.ವಿ:ಅ.ವಿ:ಅ.ಉ.ನೇ:2026–27/1251 ದಿನಾಂಕ:07.07.2026

2. ಈ ಕಚೇರಿ ಅಧಿಸೂಚನೆ ಸಂಖ್ಯೆ:ತು.ವಿ:ಅ.ವಿ:ಅ.ಉ.ನೇ:2026–27/1252 ದಿನಾಂಕ:07.07.2026

*******

ತುಮಕೂರು ವಿಶ್ವವಿದ್ಯಾನಿಲಯದಲ್ಲಿ 2026–27 ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವಿ ತರಗತಿಗಳಿಗೆ ವಿಷಯವಾರು ಬೋಧನೆ ಮಾಡಲು ಅತಿಥಿ ಉಪನ್ಯಾಸಕರನ್ನು ನೇಮಕ ಮಾಡುವ ಸಂಬಂಧ ಯು.ಜಿ.ಸಿ. ನಿಯಮಾನುಸಾರ ಸಂಬಂಧಿಸಿದ ವಿಷಯದಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಶೇ. 55 ಅಂಕಗಳು (ಸಾಮಾನ್ಯ ಮತ್ತು ಇತರೆ ವರ್ಗದ ಅಭ್ಯರ್ಥಿಗಳು) ಹಾಗೂ ಶೇ. 50 ಅಂಕಗಳೊಂದಿಗೆ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು) NET/SLET/SET/Ph.D ವಿದ್ಯಾರ್ಹತೆ ಹೊಂದಿರುವ ಅರ್ಹ ಅಭ್ಯರ್ಥಿಗಳಿಂದ ಉಲ್ಲೇಖ (1) & (2) ಗಳನ್ವಯ ಆನ್‌ಲೈನ್ ಮುಖೇನ ಅರ್ಜಿಗಳನ್ನು ಆಹ್ವಾನಿಸಿ ದಿನಾಂಕ:18.07.2026 ರ ಸಂಜೆ 05.30 ಗಂಟೆಯೊಳಗಾಗಿ ಅರ್ಜಿಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು.

ಸದರಿ ಅರ್ಜಿಗಳನ್ನು ಸಲ್ಲಿಸುವ ಅವಧಿಯನ್ನು **ದಿನಾಂಕ:26.07.2026 ರ ಭಾನುವಾರ ಸಂಜೆ 05.30** ರವರೆಗೆ ವಿಸ್ತರಿಸಿದ್ದು, ಈ ಅವಕಾಶವನ್ನು ಅರ್ಹ ಅಭ್ಯರ್ಥಿಗಳು ಸದುಪಯೋಗಪಡಿಸಿಕೊಳ್ಳುವಂತೆ ತಿಳಿಸಲಾಗಿದೆ.

ಸ್ನಾತಕೋತ್ತರ ಪದವಿಯ ವಿಷಯಗಳು : **ಸಮೂಹ ಸಂವಹನ & ಪತ್ರಿಕೋದ್ಯಮ, ಸಮಾಜಕಾರ್ಯ, ಸಮಾಜಶಾಸ್ತ್ರ, ಸಾರ್ವಜನಿಕ ಆಡಳಿತ, ವಾಣಿಜ್ಯಶಾಸ್ತ್ರ & ವಾಣಿಜ್ಯಶಾಸ್ತ್ರ(ಫಿನ್ ಟೆಕ್ & ಇನ್‌ಷ್ಯೂರೆನ್ಸ್), ವಾಣಿಜ್ಯಶಾಸ್ತ್ರ(ತಿಪಟೂರು), ವಾಣಿಜ್ಯಶಾಸ್ತ್ರ(ಮಾಹಿತಿ ವ್ಯವಸ್ಥೆ), ದೈಹಿಕ ಶಿಕ್ಷಣ, ಪ್ರಾಣಿಶಾಸ್ತ್ರ, ಆಹಾರ ವಿಜ್ಞಾನ & ಪೋಷಣೆ, ಸಾವಯವ ರಸಾಯನಶಾಸ್ತ್ರ, ಮನೋವಿಜ್ಞಾನ, ರಸಾಯನಶಾಸ್ತ್ರ, ಭೌತಶಾಸ್ತ್ರ, ಸೂಕ್ಷ್ಮಜೀವಶಾಸ್ತ್ರ, ಜೈವಿಕ ತಂತ್ರಜ್ಞಾನ, ಸಸ್ಯಶಾಸ್ತ್ರ, ಗಣಕ ವಿಜ್ಞಾನ (M.Sc. in Computer Science & M.Sc. in Data Science), ಗಣಿತಶಾಸ್ತ್ರ, ಗಣಿತಶಾಸ್ತ್ರ(ಸಿರಾ), ಜೀವರಸಾಯನಶಾಸ್ತ್ರ, ಜೀವಾವರಣಶಾಸ್ತ್ರ & ಪರಿಸರ ವಿಜ್ಞಾನ ಹಾಗೂ ರಾಜ್ಯಶಾಸ್ತ್ರ.**

ಇನ್ನುಳಿದಂತೆ ಉಲ್ಲೇಖ (1) & (2) ರ ಅಧಿಸೂಚನೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ಆದೇಶದ ಮೇರೆಗೆ

23.07.2026

ಉಪಕುಲಸಚಿವರು

ಉಪಕುಲಸಚಿವರು

ಅಭಿವೃದ್ಧಿ ವಿಭಾಗ

ತುಮಕೂರು ವಿಶ್ವವಿದ್ಯಾನಿಲಯ

ತುಮಕೂರು